ಪಾವತಿಸಿದಲ್ಲಿ ಈ ತಾಲ್ಲೂಕಿನಲ್ಲಿ ವಿದ್ಯುತ್ ವ್ಯವಸ್ಥೆ ಸುಧಾರಣೆ ಕಾರ್ಯಗಳನ್ನು ಕೈಗೊಳ್ಳುವಲ್ಲಿ ಸಹಕಾರಿಯಾಗುತ್ತದೆ.

ಆ.ಇ. ಹುಕ್ಕೇರಿ ತಾಲ್ಲೂಕಿನಲ್ಲಿ ಹಾಲಿ ಇರುವ 100 ಕೆ.ವಿ.ಮತ್ತು 33 ಕೆ.ವಿ. ವಿದ್ಯುತ್ ವಿತರಣಾ ಕೇಂದ್ರಗಳಿಂದ 51 ಎಂ.ವಿ.ಎ ಪ್ರಮಾಣದಷ್ಟು ವಿದ್ಯುತ್ತನ್ನು ಸರಬರಾಜು ಮಾಡಲಾಗುತ್ತಿದೆ. ಹುಕ್ಕೇರಿ ತಾಲ್ಲೂಕಿನಲ್ಲಿನ ವಿದ್ಯುತ್ ಸಮಸ್ಯೆಗಳನ್ನು ನಿವಾರಿಸಲು ಹುಕ್ಕೇರಿಯ 110ಕೆ.ವಿ. ವಿದ್ಯುತ್ ವಿತರಣಾ ಕೇಂದ್ರದಲ್ಲಿ ಒಂದು 10 ಎಂ.ವಿ.ಎ ಸಾಮರ್ಥ್ಯದ ಹೆಚ್ಚುವರಿ ಪವರ್ ಟ್ರಾನ್ಸ್‌ಫಾರ್ಮರನ್ನು ಅಳವಡಿಸಲು ಹಾಗೂ ಸಂಕೇಶ್ವರದಲ್ಲಿ ಹಾಲಿ ಇರುವ 33 ಕೆ.ವಿ, ವಿದ್ಯುತ್ ವಿತರಣಾ ಕೇಂದ್ರವನ್ನು ಒಟ್ಟು 30 ಎಂ.ವಿ.ಎ.ಸಾಮರ್ಥ್ಯದ ಪವರ್ ಟ್ರಾನ್ಸ್‌ಫಾರ್ಮರ್‌ಗಳೊಡನೆ 110 ಕೆ.ವಿ.ವಿದ್ಯುತ್ ವಿತರಣಾ ಕೇಂದ್ರವನ್ನಾಗಿ ಉನ್ನತೀಕರಣಗೊಳಿಸಲೂ ಸಹ ಕ್ರಮಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ.ಈ ಕಾರ್ಯಗಳು ಹಮ್ಮಿಕೊಳ್ಳಲಾಗಿರುತ್ತದೆ. ಈ ಕಾರ್ಯಗಳು ಪೂರ್ಣಗೊಂಡನಂತರ ಹುಕ್ಕೇರಿ ತಾಲ್ಲೂಕಿನ ವಿದ್ಯುತ್ ಬೇಡಿಕೆಯನ್ನು ಪೂರೈಕೆ ಮಾಡಲು ಅನುಕೂಲವಾಗುತ್ತದೆ. ಹುಕ್ಕೇರಿಯಲ್ಲಿರುವ 110 ಕೆ.ವಿ.ವಿದ್ಯುತ್ ವಿತರಣಾ ಕೇಂದ್ರದಲ್ಲಿ 10 ಎಂ.ವಿ.ಎ. ಸಾಮರ್ಥ್ಯದ ಹೆಚ್ಚುವರಿ ಪವರ್ ಟ್ರಾನ್ಸ್‌ಫಾರ್ಮರ್‌ನ ಅಳವಡಿಕೆಯ ಕಾರ್ಯವನ್ನು ಮುಂಚಿರುವ ವರ್ಷವಾದ 2003-04ರಲ್ಲಿ ನಿರ್ವಹಿಸಲು ಉದ್ದೇಶಿಸಿದೆ. ಸಂಕೇಶ್ವರದಲ್ಲಿರುವ 33 ಕೆ.ವಿ.ಗೆ ಉನ್ನತೀಕರಣ ಗೊಳಿಸುವ ಕಾರ್ಯವನ್ನು ಸಹ ಮುಂಬರುವ ವರ್ಷವಾದ 2003-04ರಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಿದೆ.

ಬೆಳಗಾವಿ ಕಾರಾಗೃಹ ಸ್ಥಿತಿಗತಿ

191(241) ಶ್ರೀ ಉಮೇಶ್ ವಿಶ್ವನಾಥ್ ಕತ್ತಿ (ಹುಕ್ಕೇರಿ) : ಮಾನ್ಯ ಬಂದೀಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಬೆಳಗಾವಿ ಜಿಲ್ಲೆ ಬೆಳಗಾವಿ ಕಾರಾಗೃಹವು ಅವ್ಯವಸ್ಥೆಗಳಿಂದ ಕೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ. ಈ ಜೈಲಿನ ಸುಧಾರಣೆಗೆ ಹಮ್ಮಿಕ್ಕೊಂಡಿರುವ ಯೋಜನೆಗಳಾವುವು?

ಇ. ಕಾರಾಗೃಹದ ಖೈದಿಗಳನ್ನು ಸಂದರ್ಶಿಸಲು ಬರುವ ಸಂಬಂಧಿಗಳನ್ನು ಜೈಲಿನ ಸಿಬ್ಬಂದಿ ಲಂಚ ಕೇಳುತ್ತಾರೆಂಬ ಸಂಗತಿ ನಿಜವೇ ಈ ಬಗ್ಗೆ ಸ್ಥಳೀಯ ಪತ್ರಿಕೆಯಲ್ಲಿ ಸುದ್ದಿ ಪ್ರಸಾರವಾಗಿದ್ದು ನಿಜವೇ ಇದರ ಬಗ್ಗೆ ಸರಕಾರದ ಕ್ರಮವೇನು. ತಪ್ಪಿತಸ್ಥರ ಮೇಲೆ ಸರಕಾರ ಯಾವ ಕ್ರಮ ಜರುಗಿಸಲಾಗುವುದು?

ಶ್ರೀರಾಜಾ ಅಮರೇಶ್ವರ ನಾಯಕ್ (ಬಂದೀಖಾನೆ ಸಚಿವರು)

ಅ. ಬಂದಿದೆ.

ಆ. ಜೈಲು ಸುಧಾರಣೆಗೆ ಗಣಕಯಂತ್ರಗಳ ಅಳವಡಿಕೆ. ಆಂಬ್ಯುಲೆನ್ಸ್. ಮೋಟಾರ ಸೈಕಲ್, ಜೈಲು, ಆಸ್ಪತ್ರೆಗೆ ಕ್ಷ ಕಿರಣ ಯಂತ್ರ, ಬಂದಿಗಳ ಕೊಠಡಿಗೆ ದೂರದರ್ಶನಗಳನ್ನು ಅಳವಡಿಸಲಾಗಿದೆ.

ಇ. ದೂರು ಆಧಾರರಹಿತವಾಗಿರುವುದರಿಂದ ಕ್ರಮ ತೆಗೆದುಕೊಳ್ಳುವ ಬಗ್ಗೆ ಪ್ರಶ್ನೆ ಉದ್ಭವಿಸುವುದಿಲ್ಲ.